ವುದಾಗಿಯೂ ಕಾರ್ಖಾನೆಯವರು ತಿಳಿಸಿರುತ್ತಾರೆ ಆದರೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿಯು ೪ ತಿಂಗಳು ಅಂದರೆ ೩೧-೧೨-೧೯೮೩ರ ವರೆವಿಗೆ ಉಳಿದ ಕೆಲಸವನ್ನು ಪೂರ್ಣಗೊಳಿಸಲು ಕಾಲಾವಕಾಶ ನೀಡಿದೆ.

೩) ಇಲ್ಲ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್.—ತುಂಗಭದ್ರಾ ಪಲ್ಪ ಮತ್ತು ಬೋರ್ಡ್ ಕಾರ್ಖಾನೆಯವರು ಪರಿಷ್ಕರಣದ ಯಂತ್ರಗಳನ್ನು ಹಾಕುವ ಕೆಲಸ ಶೇಕಡಾ ೬೦ ರಷ್ಟು ಆಗಿದೆ ಎಂದು ಹೇಳಲಾಗಿದೆ. ಇನ್ನುಳಿದ ಕೆಲಸವನ್ನು ತಾ ೩೧-೧೨-೧೯೮೩ ರೊಳಗಾಗಿ ಪೂರ್ತಿ ಮಾಡಬೇಕೆಂದು ಹೇಳಿದ್ದಾರೆ. ಕೊನೆಯಪಕ್ಷ ಮುಂದಿನ ಮಾರ್ಚಿ ತಿಂಗಳೊಳಗಾಗಿಯಾದರೂ ಈ ಕೆಲಸವನ್ನು ಪೂರ್ತಿ ಮಾಡುವಂತೆ ತಾವು ಅವರಿಗೆ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ. ಏಕೆಂದರೆ, ಆಲ್ಲಿ ಪ್ರಸಿದ್ಧವಾದ ಹುಲಿಗೆಮ್ಮನ ದೊಡ್ಡ ಜಾತ್ರೆ ನಡೆಯುತ್ತದೆ. ಆ ಸಮಯದಲ್ಲಿ ಆಲ್ಲಿಗೆ ಸುಮಾರು ೫೦ ಸಾವಿರದಷ್ಟು ಜನರು ಬರುತ್ತಾರೆ. ಆ ಬೇಸಿಗೆ ಸಮಯದಲ್ಲಿ ರಿಜರ್ವಾಯರ್‌ನಲ್ಲಿ ನೀರು ಸಾಕಷ್ಟು ಇಲ್ಲದ ಕಾರಣದಿಂದ ಈ ಕಾರ್ಖಾನೆಯವರು ಹೊರಬಿಡುವಂತಹ ಮಲಿನ ನೀರನ್ನು ಕುಡಿದು ಜನರು ತೊಂದರೆ ಅನುಭವಿಸಬೇಕಾಗಿದೆ. ಆದ್ದರಿಂದ ಮುಂದಿನ ಮಾರ್ಚಿ ತಿಂಗಳೊಳಗೆ ಈ ಕೆಲಸವನ್ನು ಆವರು ಪೂರೈಸುವಂತೆ ಮಾನ್ಯ ಸಚಿವರು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸರ್ಕಾರದ ಆದೇಶದ ಮೇರೆಗೆ ಡಿಸೆಂಬರ್ ಅಂತ್ಯದೊಳಗೆ ಪೂರೈಸಲಾಗುತ್ತದೆ. ಮಾರ್ಚಿ ಅಂತ್ಯದೊಳಗೆ ಹಾಗೆಯೇ ಆಗುತ್ತದೆ. ಸರ್ಕಾರ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್.—ನಮ್ಮ ಕೊಪ್ಪಳ ತಾಲ್ಲೂಕಿನಲ್ಲಿ ದೊಡ್ಡ ಕೈಗಾರಿಕೆಗಳು ಸ್ಥಾಪಿತವಾಗಿರುವುದರಿಂದ ಕೇಂದ್ರ ಸರ್ಕಾರದಿಂದ ಸಿಗುತ್ತಿದ್ದ ೧೫ ಪರ್ಸೆಂಟ್ ಸಬ್ಸಿಡಿ ಸಿಗುತ್ತಿಲ್ಲ. ತುಂಗಭದ್ರಾ ಪಾಲಿಫೈಬರ್ಸ್‌ನವರು ಕಾರ್ಖಾನೆಗಳನ್ನು ಸ್ಥಾಪನೆ ಮಾಡಿರುವುದರಿಂದ ಅವರು ೩೦ ಕೋಟಿ ರೂಪಾಯಿಗಳು ಬಂಡವಾಳ ಹೂಡಿದ್ದಾರೆ, ಅವರು ೩೦ ಕೋಟಿ ರೂಪಾಯಿಗಳ ಬಂಡವಾಳ ಹೂಡಿರುವುದರಿಂದ, ತಾಲ್ಲೂಕಿನಲ್ಲಿ ಹೂಡಬೇಕಾದ ಬಂಡವಾಳದ ಗುರಿ ಮುಗಿಯುತ್ತದೆ. ಆದ್ದರಿಂದ ಸಣ್ಣ ಕೈಗಾರಿಕೆಗಳಿಗೆ ನಮ್ಮಲ್ಲಿ ಪ್ರೋತ್ಸಾಹ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈ ಪ್ರಶ್ನೆಗೆ ಸಂಬಂಧವಿಲ್ಲದಿದ್ದರೂ, ಮಾನ್ಯ ಸದಸ್ಯರ ಸಲಹೆಯನ್ನು ಅತ್ಯಂತ ಸಹಾನುಭೂತಿಯಿಂದ ಪರಿಶೀಲಿಸುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ೩೪೧ (೯೭) ಮಾನ್ಯ ಸದಸ್ಯರಾದ ಬಾಕಿಲ ಹುಕ್ರಪ್ಪ, ಸದಸ್ಯರು ಬಂದಿಲ್ಲ.

ಶ್ರೀ ಎಸ್.ಎಸ್. ಕಡಪಟ್ಟಿ ಪ್ರಶ್ನೆ ನಂ. ೩೪೨ (೧೧೯) ಸದಸ್ಯರು ಬಂದಿಲ್ಲ.

ಗಜೇಂದ್ರ ಗಡದಲ್ಲಿ ಕುಷ್ಟರೋಗಿಗಳ ಪುನರ್‌ವಸತಿ ಕೇಂದ್ರವನ್ನು ಸ್ಥಾಪಿಸುವುದು

೧೨೦ ಶ್ರೀ ಜಿ.ಎಸ್. ದೊಡ್ಡಮೇಟಿ (ರೋಣ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಕುಷ್ಟರೋಗಿಗಳ ಪುನರ್ವಸತಿ ನಿರ್ವಾಣ ಕೇಂದ್ರವನ್ನು ರೋಣ ತಾಲ್ಲೂಕು ಗಜೇಂದ್ರ ಗಡದಲ್ಲಿ ಸ್ಥಾಪಿಸಲು ಸರ್ಕಾರದವರು ಯಾವುದಾದರೂ ಯೋಜನೆಯನ್ನು ಸಿದ್ಧಪಡಿಸಿರುವರೇ?

ಆ) ಹಾಗಿದ್ದಲ್ಲಿ ಆ ಯೋಜನೆ ಯಾವ ಹಂತದಲ್ಲಿದೆ?

ಇ) ಸದರಿ ಯೋಜನೆಯನ್ನು ಸಿದ್ಧಪಡಿಸದಿದ್ದಲ್ಲಿ ಸರ್ಕಾರದವರು ಈ ಕೇಂದ್ರವನ್ನು ಸ್ಥಾಪಿಸಲು ಸೂಕ್ತ ಕ್ರಮ ಕೈಗೊಳ್ಳುವರೇ?

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಈಗಾಗಲೇ ಮೂರು ರೆವಿನ್ಯೂ ವಿಭಾಗಗಳಲ್ಲಿ ಒಂದೊಂದರಂತೆ ಮೂರು ಕುಷ್ಠ ರೋಗಿಗಳ ಪುನರ್ವಸತಿ ಕೇಂದ್ರಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡ ಲಾಗಿದೆ. ಬೆಳಗಾಂ ವಿಭಾಗದಲ್ಲಿ ಖಿನಗಾಂವ್ ಗುಲ್ಬರ್ಗಾ ವಿಭಾಗಗಳಲ್ಲಿ ಗುಲ್ಬರ್ಗಾ ಮತ್ತು ಮೈಸೂರು ವಿಭಾಗದಲ್ಲಿ ಮಂಗಳೂರಿನಲ್ಲೂ ಇವೆ. (ಮೂಡುಪಡ್ಡೆ) ಆಲ್ಲಲ್ಲಿಯ ರೋಗಿಗಳ ಬೇಡಿಕೆಗಳನ್ನು ಈ ಕೇಂದ್ರಗಳು ಪೂರೈಸುತ್ತವೆ.

ಶ್ರೀ ಜಿ.ಎಸ್. ದೊಡ್ಡಮೇಟಿ.—ಮಾನ್ಯ ಮಂತ್ರಿಗಳು ಉತ್ತರವನ್ನು ನೋಡಿದರೆ, ನಮ್ಮ ಭಾಗದಲ್ಲಿ ಕುಷ್ಠರೋಗಿಗಳ ಸಂಖ್ಯೆ ಕಡಿಮೆ ಎನ್ನುವ ಅರ್ಥವೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಕಡಿಮೆ ಇದ್ದಾರೆ ಜಾಸ್ತಿ ಇದ್ದಾರೆ ಎನ್ನುವ ಪ್ರಶ್ನೆಯಲ್ಲ, ರಾಜ್ಯದ ಎಲ್ಲಾ ಕಡೆಗಳಲ್ಲೂ ಪುನರ್‌ವಸತಿ ಕೇಂದ್ರಗಳನ್ನು ಪ್ರಾರಂಭ ಮಾಡಬೇಕೆಂದು ಸರ್ಕಾರ ನಿಗದಿ ಮಾಡಿ ಒಂದೊಂದು ವ್ಯಾಪ್ತಿಯಲ್ಲಿ ಒಂದೊಂದು ಪುನರ್ವಸತಿ ಕೇಂದ್ರಗಳನ್ನು ಮಾಡಿದ್ದೇವೆ. ಕುಷ್ಠ ರೋಗಿಗಳಿಗೆ ಸಂಬಂಧಪಟ್ಟಹಾಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಬರಬೇಕಾಗಿದೆ. ಈಗಾಗಲೇ ಇಡೀ ರಾಷ್ಟ್ರದಲ್ಲಿ ೧೬ ಕುಷ್ಠರೋಗಿಗಳ ಪುನರ್‌ವಸತಿ ಕೇಂದ್ರಗಳಿವೆ, ಅದರಲ್ಲಿ ಮೂರು ಪುನರ್ವಸತಿ ಕೇಂದ್ರಗಳು ಕರ್ನಾಟಕದಲ್ಲಿಯೇ ಇವೆ. ಸದ್ಯದ ಪರಿಸ್ಥಿತಿಯಲ್ಲಿ ಮತ್ತೊಂದು ಪ್ರಾರಂಭ ಮಾಡತಕ್ಕ ಪರಿಸ್ಥಿತಿ ಇಲ್ಲವೆಂದು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಜಿ.ಎಸ್. ದೊಡ್ಡಮೇಟಿ.—ಈ ಬಗ್ಗೆ ಸಾರ್ವಜನಿಕರಿಂದ ಬೇಡಿಕೆ ಬಂದಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಬಂದಿಲ್ಲ.

ಶ್ರೀ ಜಿ.ಎಸ್. ದೊಡ್ಡಮೇಟಿ—.ಕುಷ್ಠರೋಗಿಗಳಿಂದ ಬೇಡಿಕೆ ಸರ್ಕಾರಕ್ಕೆ ಬಂದಿಲ್ಲವೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಕುಷ್ಠರೋಗಿಗಳ ಪುನರ್ವಸತಿ ಕೇಂದ್ರವನ್ನು ಪ್ರಾರಂಭ ಮಾಡ ಬೇಕೆಂದು ಸಾರ್ವಜನಿಕರಿಂದ ಮತ್ತು ಕುಷ್ಠರೋಗಿಗಳಿಂದ ಯಾವುದೇ ಬೇಡಿಕೆ ಸರ್ಕಾರಕ್ಕೆ ಬಂದಿಲ್ಲ.

ಮಂತ್ರಿಗಳ ಕಾರ್ಯಾಲಯಗಳಿಗೆ ಮಂಜೂರಾದ ಸಿಬ್ಬಂದಿ ವರ್ಗ

(೨೨೭) ಶ್ರೀ ಎಂ. ಎಂ. ನದಾಫ್ (ಶಿಗ್ಗಾಂವ್).— ಮಾನ್ಯ ಮುಖ್ಯಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಪ್ರತಿಯೊಬ್ಬ ಸಚಿವರುಗಳಿಗೆ ಕೊಟ್ಟಿರುವ ಆಪ್ತ ಕಾರ್ಯದರ್ಶಿಗಳ ಮತ್ತು ಆಪ್ತ ಸಹಾಯಕ ರುಗಳ ಸಂಖ್ಯೆ ಎಷ್ಟು? ಪ್ರತಿಯೊಬ್ಬ ಆಪ್ತ ಸಹಾಯಕರಿಗೆ ವಹಿಸಿರುವ ಕೆಲಸವೇನು?

ಶ್ರೀ ರಾಮಕೃಷ್ಣ ಹೆಗ್ಗಡೆ (ಮಾನ್ಯ ಮುಖ್ಯಮಂತ್ರಿಗಳು).—

ಅ) ಪ್ರತಿಯೊಬ್ಬ ಸಚಿವರುಗಳಿಗೂ ಹಾಗೂ ರಾಜ್ಯ ಸಚಿವರುಗಳಿಗೂ ಕರ್ನಾಟಕ ಸರ್ಕಾರದ ಆಜ್ಞೆ ಕ್ರಮಾಂಕ ಜಿಎಡಿ ೪೫೫ ಎಎಸ್‌ಎ ೧೯೭೪ ದಿನಾಂಕ ೨೯-೬-೧೯೭೪ ಮತ್ತು ಸರ್ಕಾರಿ ಆದೇಶ ಕ್ರಮಾಂಕ ಸಂಖ್ಯೆ ಡಿಪಿಎಆರ್ ೩೯೭ ಎಎಸ್‌ಟಿ ೭೯ ದಿನಾಂಕ ೨೨-೧೨-೧೯೭೯ರ ಪ್ರಕಾರ ಸಚಿವರ ಆಪ್ತ ಸಿಬ್ಬಂದಿ ವರ್ಗದ ವಿವರವು ಪ್ರಸ್ತುತ ಈ ಕೆಳಗೆ ಸೂಚಿಸಿದಂತೆ ಇದೆ.

೧) ಆಪ್ತ ಕಾರ್ಯದರ್ಶಿಯ ಹುದ್ದೆಗಳು ಒಂದು.

೨) 'ಸಿ' ವರ್ಗದ ಶ್ರೇಣಿಯ ಆಪ್ತ ಸಹಾಯಕರುಗಳ ಹುದ್ದೆಗಳು ಐದು.

ಆ) ಸಚಿವರುಗಳ ಖಾತೆಗೆ ಸಂಬಂಧಪಟ್ಟಂತೆ ಕಛೇರಿಯ ಕೆಲಸ ಕಾರ್ಯಗಳನ್ನು ನೋಡಿ ಕೊಳ್ಳುವಲ್ಲಿ ಸಹಾಯಕರಾಗುವುದು ಹಾಗೂ ಸಚಿವರ ಸೂಚನೆಯ ಮೇರೆಗೆ ಕಾಲ ಕಾಲಕ್ಕೆ ಒಪ್ಪಿಸಿದ ಕಾರ್ಯವನ್ನು ನಿರ್ವಹಿಸುವುದು.